ಕಾರ್ಯಪಾಲಕ ಅಭಿಯಂತರರ ಕಛೇರಿ
ಲೋಇ, ಬೆಂಗಳೂರು ವಿಭಾಗ,
ಲೋಇ ಅನೆಕ್ಸ್ ಕಟ್ಟಡ 2ನೇ ಮಹಡಿ
ಕೆ.ಆರ್.ವೃತ್ತ ಬೆಂಗಳೂರು 01

ದೂರವಾಣಿ : 080-22133370
ಫ್ಯಾಕ್ಸ್: 080-22133365
ಇ ಮೇಲ್:eepwdbngdn@yahoo.com

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಸಂಖ್ಯೆ:ಕಾನಿಇಂ:ಬೆಂವಿ:ಎಇ-I:2022-23/1491 Date:- 29/6/22

ರವರಿಗೆ:- "ನೊಂದಾಯಿತ ಅಂಚೆ ಮತ್ತು ಸ್ವೀಕೃತಿ"

**Director,**
**St. Benedict's School,**
**(Unit of Asirvanam Benedictine Society)**
Asirvanam, Anchepalya, Kumbalgodu (PO),
Kengeri, Bangalore – 560074.

ಮಾನ್ಯರೇ,

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಅಂಚೇಪಾಳ್ಯ ಗ್ರಾಮದಲ್ಲಿರುವ **St. Benedict's School (Unit of Asirvanam Benedictine Society)** ಪ್ರೌಢ ಶಾಲಾ ಕಟ್ಟಡಕ್ಕೆ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಉಲ್ಲೇಖ:
1. ದಿನಾಂಕ: 19.09.2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
2. ಸರ್ಕಾರದ ಪತ್ರ ಸಂಖ್ಯೆ: ಲೋಇ 59 ಬಿಇಡಿ 2019 ದಿನಾಂಕ: 07.05.2022
3. ತಮ್ಮ ಕಛೇರಿಯ ಪತ್ರ ದಿನಾಂಕ: 23.06.2022
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: 2022-23/241 ದಿನಾಂಕ: 27.06.2022

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಅಂಚೇಪಾಳ್ಯ ಗ್ರಾಮದಲ್ಲಿರುವ **St. Benedict's School (Unit of Asirvanam Benedictine Society)** ಪ್ರೌಢ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಶಿಕ್ಷಣ ಇಲಾಖೆಗೆ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖ (3) ರ ಪತ್ರದಲ್ಲಿ ಕೋರಿರುತ್ತೀರಿ.

ರಿಟ್ ಪಿಟೀಷನ್ (ಸಿವಿಲ್) ಸಂ: 484 (2004) ಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಲಾದ ಜಡ್ಜ್‌ಮೆಂಟ್‌ನಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ರವರು ಶಾಲಾ/ಕಾಲೇಜು ಕಟ್ಟಡಗಳನ್ನು ಪರಿಶೀಲಿಸಿ **"Structurally Stable Certificate"** ಅನ್ನು ನೀಡಲು ಆದೇಶಿಸಿರುವುದರಿಂದ ಹಾಗೂ ಉಲ್ಲೇಖ (1) ರ ಸಭಾ ನಡವಳಿಯ ನಿರ್ದೇಶನದಂತೆ ಈಗಾಗಲೇ ನಿರ್ಮಾಣಗೊಂಡು ಅಸ್ತಿತ್ವದಲ್ಲಿರುವಂತಹ ಕಟ್ಟಡಗಳಿಗೆ ರಚನಾತ್ಮಕ (Structural Evaluation) ಮೌಲ್ಯಮಾಪನ ಮಾಡಿಸಿ National Building code ಮಾನದಂಡಗಳ ಅನ್ವಯ ಪ್ರಮಾಣ ಪತ್ರ ನೀಡಲು ಸೂಚಿಸಿರುವುದರಿಂದ ಪ್ರಸ್ತಾಪಿತ ಕಟ್ಟಡದ ಸ್ಟ್ರಕ್ಚರಲ್ ಪರೀಕ್ಷೆಗಳನ್ನು ನಡೆಸಿ ಈ ಕೆಳಕಂಡಂತೆ ವರದಿ ನೀಡಲಾಗಿದೆ.

ಸದರಿ ಕಟ್ಟಡದ ನಕ್ಷೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುಂಬಳಗೋಡು ಗ್ರಾಮ ಪಂಚಾಯಿತಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ರವರು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡವು ನೆಲಮಹಡಿ, ಮೊದಲನೇ ಮಹಡಿ, ಎರಡನೇ ಮಹಡಿ ಹಾಗೂ ಮೂರನೇ ಮೇಲ್ಮಹಡಿಗಳನ್ನು ಒಳಗೊಂಡಿದ್ದು 2020 ನೇ ಸಾಲಿನಲ್ಲಿ ನಿರ್ಮಿಸಲಾಗಿರುತ್ತದೆ. ಸದರಿ ಕಟ್ಟಡಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ವರದಿಸಿರುತ್ತಾರೆ.

ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ಕಟ್ಟಡ ಸುರಕ್ಷತೆ ಪ್ರಮಾಣ ಪತ್ರವನ್ನು ವಿತರಿಸಲು ಮೊತ್ತ ರೂ. 5,000/- (ರೂ. ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಅಂಚೇಪಾಳ್ಯ ಗ್ರಾಮದಲ್ಲಿರುವ **St. Benedict's School (Unit of Asirvanam Benedictine Society)** ಪ್ರೌಢ ಶಾಲಾ ರವರು South India Bank, ಡಿ.ಡಿ. ಸಂಖ್ಯೆ 357594 ದಿನಾಂಕ : 28.06.2022 ರಲ್ಲಿ ಪಾವತಿಸಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ದಿನಾಂಕ : 24.06.2022 ರಂದು ಸದರಿ ಕಟ್ಟಡದ ಭೌತಿಕ ಸ್ಥಿತಿಯನ್ನು ಪರಿಶೀಲಿಸಲಾಗಿ, ಕಟ್ಟಡಕ್ಕೆ ಸಣ್ಣಪುಟ್ಟ ದುರಸ್ಥಿಯೊಂದಿಗೆ ಬಣ್ಣ ಬಳಿಯುವ ಕಾಮಗಾರಿಯು ಅವಶ್ಯವಿರುತ್ತದೆ ಎಂದು ವರದಿಸಿರುತ್ತಾರೆ. ಅದರಂತೆ, ಕಟ್ಟಡದ ದುರಸ್ಥಿಯನ್ನು ಕೈಗೊಂಡು, ಸುಸ್ಥಿತಿಯಲ್ಲಿರಿಸಲು ಸೂಚಿಸಲಾಗಿದೆ.

- **St. Benedict's School (Unit of Asirvanam Benedictine Society)** ಪ್ರೌಢ ಶಾಲಾ ಕಟ್ಟಡವನ್ನು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಅಂಚೇಪಾಳ್ಯ ಗ್ರಾಮದಲ್ಲಿ ನಿರ್ಮಿಸಲಾಗಿರುತ್ತದೆ ಎಂದು ಶಾಲಾ ಸಂಸ್ಥೆಯವರು ಮನವಿ ಪತ್ರದಲ್ಲಿ ವರದಿಸಿರುತ್ತಾರೆ.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುಂಬಳಗೋಡು ಗ್ರಾಮ ಪಂಚಾಯಿತಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ರವರಿಂದ ಅನುಮೋದಿತ ನಕ್ಷೆಗನುಗುಣವಾಗಿ ಕಟ್ಟಡವನ್ನು ನಿರ್ಮಾಣ ಮಾಡಲಾಗಿರುತ್ತದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ವರದಿಸಿರುತ್ತಾರೆ.
- **JJC Engineering Pvt. Ltd.,** ರವರು ನೀಡಿರುವ Certificate for Completed work by Builder/Construction ಪ್ರಮಾಣ ಪತ್ರವನ್ನು ಸಂಸ್ಥೆಯವರು ಒದಗಿಸಿರುತ್ತಾರೆ.

ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರು ನೀಡಿರುವ ವರದಿಯನ್ವಯ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಅಂಚೇಪಾಳ್ಯ ಗ್ರಾಮದಲ್ಲಿರುವ **St. Benedict's School (Unit of Asirvanam Benedictine Society)** ಪ್ರೌಢ ಶಾಲಾ ಕಟ್ಟಡವು ಪ್ರಸಕ್ತ ಶೈಕ್ಷಣಿಕ ಸಾಲಿಗೆ **Structurally Stable** ಇದೆ ಎಂದು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ಉಳಿದಂತೆ, ಪ್ರಸ್ತಾಪಿತ ಕಟ್ಟಡದ Non - Structural Elements (Infrastructural facilities) ಗೆ ಸಂಬಂಧಿಸಿದಂತೆ, ಸಿವಿಲ್ ಇಂಜಿನಿಯರ್, ಆರೋಗ್ಯಾಧಿಕಾರಿ, ಕಂದಾಯ ಅಧಿಕಾರಿ, ಮನಶ್ಶಾಸ್ತ್ರಜ್ಞ, ಅಗ್ನಿಶಾಮಕ ಅಧಿಕಾರಿ, ಸ್ಥಳೀಯ ಸಂಸ್ಥೆಯ ಅಧಿಕಾರಿಗಳನೊಳಗೊಂಡ ಪರೀಕ್ಷಾ ತಂಡದವತಿಯಿಂದ ಪರಿಶೀಲಿಸಿ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ "Fire safety Certificate" ಅನ್ನು ಮುಖ್ಯ ಅಗ್ನಿಶಾಮಕ ಅಧಿಕಾರಿಯಿಂದ ಪಡೆಯತಕ್ಕದ್ದು.

ತಮ್ಮ ವಿಶ್ವಾಸಿ,<br>
ಸಹಿ/-<br>
ಕಾರ್ಯಪಾಲಕ ಅಭಿಯಂತರರು,<br>
ಲೋಇ., ಬೆಂಗಳೂರು ವಿಭಾಗ,<br>
ಬೆಂಗಳೂರು.

ಪ್ರತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ದಕ್ಷಿಣ ಉಪವಿಭಾಗ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.

ಕಾರ್ಯಪಾಲಕ ಅಭಿಯಂತರರು,<br>
ಲೋಇ., ಬೆಂಗಳೂರು ವಿಭಾಗ,<br>
ಬೆಂಗಳೂರು.